ಕೋಲಾರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವುದು.

41 (735) ಶ್ರೀ ಎಂ.ವಿ. ವೆಂಕಟಪ್ಪ, (ಮುಳಬಾಗಿಲು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನವರು ಹೊಸ ಪ್ರೈಮರಿ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಅನುಮತಿ ಕೋರಿ ಸರ್ಕಾರಕ್ಕೆ: ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಇ) ಸರ್ಕಾರಕ್ಕೆ ಹಣದ ಕೊರತೆ ಇದ್ದಲ್ಲಿ 1993–94ನೇ ಸಾಲಿನಲ್ಲಿ ಕನಿಷ್ಟ ಬ್ರಾಂಚ್ ಪ್ರಾಥಮಿಕ ಶಾಲೆಗಳನ್ನಾದರೂ ಪ್ರಾರಂಭ ಮಾಡಲು ಕ್ರಮಕೈಗೊಳ್ಳುವರೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು

ರಸ್ತೆ ದರೋಡೆಯನ್ನು ತಪ್ಪಿಸಲು ಕೈಗೊಂಡಿರುವ ಕ್ರಮ.

42 (409) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ರಸ್ತೆ ದರೋಡೆ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪಮೊಯಲಿ (ಮುಖ್ಯ ಮಂತ್ರಿಗಳು)

1. ರಸ್ತೆ ದರೋಡೆ ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಈ ಕೆಳಗಿನಂತೆ ಇರುತ್ತವೆ.

1) ಸರ್ಕಾರಿ ಆದೇಶ ಸಂಖ್ಯೆ:ಡಿಇ:273:ಪಿಒಎಸ್ಐಪಿಎ:87 ದಿನಾಂಕ:21–3–88ಕ್ಕೆ ಅನುಗುಣವಾಗಿ ಎರಡು ಡಕಾಯಿತಿ ನಿರೋಧಕ ದಳವನ್ನು ನಿಯೋಜಿಸಲಾಗಿದ್ದು, ಒಂದು ಪಡೆ ಬೆಂಗಳೂರಿನಲ್ಲಿ ಮತ್ತೊಂದು ಬಳ್ಳಾರಿಯಲ್ಲಿರುತ್ತದೆ. ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರೊಬ್ಬರಂತೆ ಈ ಪಡೆಗಳಿಗೆ ಮುಖ್ಯಸ್ಥರಿದ್ದು, ಇವರಿಗೆ ಸಹಕರಿಸಲು ಎರಡು ಡೆಪ್ಯೂಟಿ ಸೂಪರಿಂಟೆಂಡೆಂಡ್ ಆಫ್ ಪೊಲೀಸರು, ನಾಲ್ಕು ಜನ ಪೊಲೀಸ್ ಇನ್ಸ್‌ಪೆಕ್ಟರುಗಳು, ಹದಿನೆಂಟು ಪೊಲೀಸ್ ಕಾನ್ಸ್‌ಟೇಬಲ್‌ಗಳು, ಮತ್ತು ಸಹಾಯಕ ಸಿಬ್ಬಂದಿಗಳು ಇರುತ್ತಾರೆ.

2) ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ:141:ಐಒಪಿ–91 ದಿನಾಂಕ: 3–2–92ರ ಮೇರೆಗೆ ಮತ್ತೊಂದು ಪಡೆ ಮಂಜೂರಾಗಿದ್ದು ಅದಕ್ಕೆ ಒಬ್ಬ ಅಪರ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರನ್ನು ಮತ್ತು ಸಹಾಯಕ ಪಡೆಯನ್ನು ಮಂಜೂರು ಮಾಡಿದ್ದು, ಇವರನ್ನು ಪಡೆಗೆ ನಿಯೋಜಿಸಬೇಕಾಗಿದೆ.

3)ಅಂತರರಾಜ್ಯ ಸಮ್ಮೇಳನ ಮತ್ತು ದಕ್ಷಿಣ ರಾಜ್ಯಗಳ ಮತ್ತು ಮಹಾರಾಷ್ಟ್ರದ ಸಿಐಡಿಯ ಪ್ರಧಾನರ